**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಕೊಪ್ಪ**

**ಸಿ. ಸಿ. ನಂ.630/2024**

**ಪಿರ್ಯಾಧಿದಾರರುಃ** ಶ್ರೀ ಟಿ. ಶ್ರೀರಂಗ ಬಿನ್ ಲೇಟ್ ಟಿ. ಮಂಜಪ್ಪ, 60 ವರ್ಷ, ಕೃಷಿಕರು, ವಾಸ ತಲವಾನೆ ಎಸ್ಟೇಟ್ ಮೇಗೂರು ಅಂಚೆ, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

**-ವಿರುದ್ಧ -**

**ಆರೋಪಿಃ** ಶ್ರೀ ಹೆಚ್ ಆರ್. ವಿಶ್ವನಾಥ ಬಿನ್ ಹೆಚ್.ಡಿ. ರಾಮಚಂದ್ರೇಗೌಡ, ಸುಮಾರು 53 ವರ್ಷ, ವಾಸ ಹೆಡದಾಳು ಗ್ರಾಮ, ಕೂದುವಳ್ಳಿ ಅಂಚೆ, ವಸ್ತಾರೆ ಹೋಬಳಿ, ಚಿಕ್ಕಮಗಳೂರು ತಾಲ್ಲೂಕು.

**ಆರೋಪಣೆ**

ಆರೋಪಿಯಾದ ನೀವು ಪಿರ್ಯಾದುದಾರರಿಗೆ ಕೊಡಬೇಕಾದ ಸಾಲದ ಬಾಬ್ತು ನೀವು ಅವರಿಗೆ ಚೆಕ್ ನಂ.081193, ದಿನಾಂಕ 01.01.2024 ನ್ನು ನಮೂದಿಸಿದ ಸಿಂಡಿಕೇಟ್ ಬ್ಯಾಂಕ್, ಚಿಕ್ಕಮಗಳೂರು ಶಾಖೆಯ ಒಂದು ಚೆಕ್ಕನ್ನು ನೀಡಿದ್ದು, ಅವರು ಸದರಿ ಚೆಕ್ಕನ್ನು ಕರ್ನಾಟಕ ಗ್ರಾಮೀಣ ಬ್ಯಾಂಕ್, ಜಯಪುರ ಶಾಖೆಗೆ ಹಾಜರುಪಸಿದಾಗ ನಿಮ್ಮ ಖಾತೆಯಲ್ಲಿ "**ಸಾಕಷ್ಟು ಹಣ ಇಲ್ಲ**" ಮತ್ತು " **Not arranged for/ Exceed arrangement"** ಎಂಬ ಹಿಂಬರಹದೊಂದಿಗೆ ನೀವು ಕೊಟ್ಟಂತ ಚೆಕ್ ವಾಪಸ್ಸಾಗಿದ್ದು ಸದರಿ ಚೆಕ್ ಅಮಾನ್ಯಗೊಂಡ ಬಗ್ಗೆ ನಿಮ್ಮ ಗಮನಕ್ಕೆ ದಿನಾಂಕ 10.04.2024 ರಂತೆ ವಕೀಲರ ನೋಟೀಸು ನೀಡಿದ್ದು, ದಿನಾಂಕ 16.04.2024 ರಂದು ನೀವು ಸದರಿ ನೋಟಿಸನ್ನು ತಿರಸ್ಕರಿಸಿದ್ದೀರಿ. ನೀವು ಚೆಕ್ ಬಾಬ್ತು ಹಣವನ್ನು ನೀಡದೇ ವರ್ಗಾವಣೀಯ ಲಿಖಿತ ಅಧಿನಿಯಮ ಕಲಂ 138 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಪ್ರಶ್ನೆ 1ಃ- ನಿಮಗೆ ಓದಿ ಹೇಳಿದ ಆರೋಪಣೆ ಅರ್ಥವಾಯಿತೇ?

ಉತ್ತರಃ **ತಿಳಿಯಿತು.**

ಪ್ರಶ್ನೆ 2ಃ-	ಮೇಲಿನ ಆಪಾಧನೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ	**ವಿಚಾರಣೆಯಾಗಬೇಕು.**

ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಸ್ವತಃ ನಾನೇ ಬರೆದುಕೊಂಡಿರುವುದು ನಿಜವೆಂದು ದೃಡೀಕರಿಸುತ್ತೇನೆ.

ದಿನಾಂಕ 25.07.2025.

ಸಹಿ/- 25.07.2025.
(ಎಂ.ಎನ್. ನಂದಿನಿ)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಕೊಪ್ಪ